GOLDEN JUBILEE 1966

Regd No B G 155 Sri (160) 30—8—1965

ಸತ್ಯವಾದಿ

49th Year
Satyavadi
DAILY
MYSORE 4

ಸಂಸ್ಥಾಪಕರು — ಧರ್ಮಪ್ರಚಾರನಿರತ ಎಂ ವಿ ಸುಬ್ಬರಾಯರು ಸಂಪಾದಕರು — ಧರ್ಮಪ್ರಚಾರನಿರತ ಎಂ ಎಸ್ ಕೃಷ್ಣರಾವ್ 2 ಪೈಸೆ

ನಾರ್ತಾ ವಿಶೇಷಗಳು

ಮೈಸೂರು— ಮಾವಳಿ ಶಾಲೆಯ ವಿದ್ಯಾರ್ಥಿ ಸಂಘದ ವಿದ್ಯಾಗಣಪತಿ ಮಹೋತ್ಸವವು 30—8—65 ರಿಂದ 2-9-65 ರವರೆಗೆ ನಡೆಯುವುದು.

ಕಾನಪೇರ — ಅಪರಾಧಿಗಳಿಗೆ ಜೈಲು ವಾಸದ ಬದಲು ಅಂಗವಿಕಲ ಮಾಡಬೇಕೆಂದು ಪಾಕಿಸ್ತಾನ್ ಪರ ನ್ಯಾಯಾಧೀಶರು ಹೇಳಿದರು : ತಿಕ್ಸೀರಾಜ್ರವರು ಜೈಲಿಗೆಹೋಗಲು ಹೆದರುವುದಿಲ್ಲವೆಂದೂ ಅದು ಖರ್ಚಿಲ್ಲದ ಸುಖವೆಂದೂ ಭಾವಿಸಿರಬೇಕೆಂದೂ ಹೇಳಿದರು

ಬೆಂಗಳೂರು— ಮೇಯರ್ ಶ್ರೀ ನಾಗಣ್ಣನವರು ಮೊನ್ನೆ ಪತ್ರಿಕೆಯ ವರೊಡನೆ ಮಾತನಾಡುತ್ತಾ— ಸೈಕಲ್ ತೆಗೆದು ಹೋಗಲೇಬೇಕೆಂದೂ, ಸರಕಾರ ಈ ಬಗ್ಗೆ ತಿರಸ್ಕರಿಸುವುದು ಸರಿಯಾಗಿಯೂ ಕೃಪ್ತಿಕರವಾಗಿಯೂ ಇಲ್ಲವೆಂದೂ ಹೇಳಿದರು | ನೀರಿನ ಉಚಿತ ಸರಬರಾಜು ಒಂದು ಪರಿಮಿತಿಯಲ್ಲಿ ಆಗಬೇಕೆಂದು ಒತ್ತಾಯ ಪಡಿಸಿದರು : ಕಾರ್ಪೋರೇಷನ್ನಿಗೆ ಸೇರದ ಪ್ರದೇಶದಲ್ಲಿ ಅತಿಕ್ರಮಿಸಿರುವುದೆಂದೂ, ಅದನ್ನು ತೆಗೆಸಿದ್ದರೆ ಅಲ್ಲಿ ಹಾಕಿರುವ ಕಾಂಪೌಂಡನ್ನು ಒಡೆದು ಹಾಕಬೇಕಾಗುವುದೆಂದೂ ಹೇಳಿದರು

ನಾಳೆಯ ಪಂಚಾಂಗ

ದೈವಜ್ಞ ಶಿಖಾಮಣಿ
ಆಸ್ಥಾನವಿದ್ವಾನ್ ಧರ್ಮಾಧಿಕಾರಿ
ರಾಜಕಾರ್ಯಾಸಕ್ತ, ಜ್ಯೋತಿರ್ವಿದ್ವನ್ಮಣಿ
ಸಂಪತ್ಕೃಷ್ಣಜೋಯಿಸಂವರಿಂದ

31 ಪುಷ್ಯಗಳವಾರ ಪಂಚಮಿ ಸ್ವಾತಿ

ಭಗವಂತನ ಕೃಪೆಯಿಂದ ಸತ್ಯವಾದಿಗೆ 49ನೇ ವರ್ಷ ಪ್ರಾರಂಭವಾಗಿದೆ

ವಿವಿಧ ವಿಷಯಗಳು

ಬೆಂಗಳೂರು ಕಾರ್ಪೋರೇಷನ್ ಆಡಳಿತ ನಡೆಸುವ ಸಿಟಿಜನ್ಸ್ ಫೋರಂ ಸೈಕಲ್ ತೆಗೆಯುವ ವಿಚಾರದಲ್ಲಿ ಸರ್ಕಾರದೊಡನೆ ಭಾರಿ ಹೋರಾಟ ನಡೆಸುವಂತೆ ಕಾಣುತ್ತದೆ ಬಹುಶಃ ಸರ್ಕಾರದ ವಿರುದ್ಧ ಇದೇ ನಮ್ಮ ಮೊದಲನೆಯ ಹೋರಾಟ ಎಂದು ಶ್ರೀ ಎಸ್. ಚನ್ನಯ್ಯನವರು ತಿಳಿಸಿದರು

ಆಹಾರ ಸಂಬಂಧಿಸಿದಂತೆ ಇನ್ನು 3 ತಿಂಗಳು ಬಿಕ್ಕಟ್ಟಿನ ಕಾಲವೆಂದು ನವ ದೆಹಲಿ ವಾರ್ತೆ ತಿಳಿಸುತ್ತದೆ

ಅಮೆರಿಕಾ ಅಧ್ಯಕ್ಷರ ಕೊಲೆ ಪಿತಿತನಿಗೆ ಗಲ್ಲಿನ ಶಿಕ್ಷೆ ವಿಧಿಸಬೇಕೆಂಬ ಕಾನೂನಿಗೆ ಅಮೆರಿಕಾ ಅಧ್ಯಕ್ಷ ಜಾನ್ಸನ್ರು ಸಹಿ ಮಾಡಿದರು.

ಕೇರಳಕ್ಕೆ ಆಂಧ್ರ ಕರ್ನಾಟಕ 5 ಸಾವಿರ ಟನ್ನುಗಳ ಅಕ್ಕಿಯನ್ನು ಸಾಗಿಸುವುದು

ಡಕಾಯಿತರನ್ನಲ್ಲಿ ಅಲ್ಪ ಸಂಖ್ಯಾತರ ಮೇಲೆ ಪಾಕಿಸ್ತಾನದ ಪೋಲೀಸ್ ಹಿಂಸಾಕೃತ್ಯದ ಬಗ್ಗೆ ಭಾರತ ಆತಂಕ ವ್ಯಕ್ತಪಡಿಸಿದೆ

ಸೈಕ್ ಪೈ ಸರ್ವೆ—ಎ ದೈಲಾಗ್ ನಿನ್ನೆ ಸಮುದ್ರ ಮಟ್ಟಕ್ಕೆ 30 ಸಾವಿರ ಅಡಿಗಳ ವರೆಲೆ ಎವರೆಸ್ಟ್‌ನಲ್ಲಿ ಜನ್ಮ ತಳೆದಿದ್ದು ಕಲ್ಕತ್ತಾ ವಾರ್ತೆ ಇದು ಹೊಸ ರಾಜಕೀಯ ಪತ್ರಿಕೆ

ಈಗಿನ ಕಾಶ್ಮೀರ ಪರಿಸ್ಥಿತಿಯಲ್ಲಿ 978 ಪಾಕಿಸ್ತಾನಿಗಳು ಕೊಲ್ಲಲ್ಪಟ್ಟರೆಂದು 101 ಮಂದಿ ಬಂಧಿತರಾಗಿರುವರೆಂದು ವರದಿಯಾಗಿದೆ

ಪಾಕೀಸ್ತಾನಿಗಳನ್ನು ಓಡಿಸಲಾಯಿತು

ಕಾಶ್ಮೀರದ ವಿಂತವು ಗಿರಿಯು ಆಜೆ ನಿನ್ನೆ ಎತ್ತರ ಹಿರಿಯ ಪರ್ವತಗಳು ಅದವೆಂದು ವರದಿಯಾಗಿದೆ ಗುರುವು ವೈಶ್ವದಲ್ಲಿ ಕಜಾಲವಾನಿನ ಉತ್ತರ ಕಡೆ ನುಗ್ಗಲು ಪಾಕೀಸ್ತಾನದ ಸೇನೆ ನುಗ್ಗುವುದಕ್ಕೆ ಪ್ರಯತ್ನಿಸಿದಾಗ ಭಾರಿ ಹೋರಾಟವಾಯಿತು ಭಾರತ ಸೇನೆಯು ಪ್ರತಿ ಹೋರಾಟ ಮಾಡಿ ಅತಿಕ್ರಮಣಗಾರರನ್ನು ಓಡಿಸಿದರು ಪಾಕೀಸ್ತಾನಿಗಳು 25ದೇಶಗಳನ್ನು ಬಿಟ್ಟುಹೋದರು ಗಾಯಗೊಂಡ 30 ಅಥವಾ 40 ಜನರನ್ನು ಅವರು ಹೊತ್ತುಕೊಂಡು ಹೋಗಲಿದ್ದಿದ್ದು ಕಾಣಬಂದಿತು

ಉತ್ತರ ಪ್ರದೇಶ ಶಾಸನ ಸಭೆಯ ಕಾಂಗ್ರೆಸ್ ಪಕ್ಷದ ನೂತನ ನಾಲ್ಕು ಸದಸ್ಯರು ಕೊಟ್ಟಿರುವ ರಾಜೀನಾಮೆಯನ್ನು ಉತ್ತರ ಪ್ರದೇಶ ಕಾಂಗ್ರೆಸ್ ಅಧ್ಯಕ್ಷ ಶ್ರೀ ಕೆ. ತ್ರಿಪಾಠಿಯವರು ನಿನ್ನೆ ನವ ದೆಹಲಿಯಲ್ಲಿ ಶ್ರೀ ಕೆ. ಕಾಮರಾಜರಿಗೆ ಅರ್ಪಿಸಿದರು.

ಭಾರತಕ್ಕೆ ಭೇಟಿ ಕೊಡುವಂತೆ ತಮಗೆ ಆಹ್ವಾನ ಬಂದಿರುವುದಾಗಿ ಕೆಂಪು ಅಂಗಿ ನಾಯಕರಾದ ಪೆರ್ಡ ಅಬ್ದುಲ್ ಗಫಾರ್ ಖಾನ್ರು ಕಾಬೂಲಿನಲ್ಲಿ ತಿಳಿಸಿದರು ಭೇಟಿ ಕೊಡುವ ಬಗ್ಗೆ ಸರಕಾರ ಪರಿಶೀಲನೆಯಲ್ಲಿದೆ ಎಂದು ಅವರು ತಿಳಿಸಿದರು.

ಬೆಂಗಳೂರಿನಲ್ಲಿ ಗಣಪತಿ ಪ್ರತಿಮೆ ಬೆಲೆ ಈ ವರ್ಷ ಹೆಚ್ಚಿದೆ ಪೂಜಾ ಸಾಮಗ್ರಿಗಳ ಬೆಲೆ ಸಹ ಏರಿದೆ ಮೈಸೂರಿನಲ್ಲೂ ಸಹ ಇದೇ ಪರಿಸ್ಥಿತಿ

ಗರ್ಭಪಾತ ವಿಷಯ

★

ದುಷ್ಟಯೋಜನೆ

❋

ಭವನೇಶ್ವರದಿಂದ ಸತಿ ವಿಶ್ವರ ಬರೆದ, ಹಿಂದೂಸ್ಥಾನ ಸ್ಟ್ಯಾಂಡರ್ಡ್‌ನಲ್ಲಿ ಪ್ರಕಟವಾದ 'ಕುಟುಂಬ ಯೋಜನೆಯನ್ನು ನಿಲ್ಲಿಸಿ' ಎಂಬ ಲೇಖನದ ಅನುವಾದವಿದು.

ಭಾರತದಲ್ಲಿ ಗರ್ಭಪಾತವನ್ನು ಶಾಸನಬದ್ಧವಾಗಿ ಮಾಡಬೇಕೆಂಬುದನ್ನು ತಿಳಿಸಿದ ಅಖಿಲ ಭಾರತ ಮಹಿಳಾ ಸಮ್ಮೇಳನಕ್ಕೆ ಸಂತೋಷದ ಅಭಿನಂದನೆಗಳು ; ಗರ್ಭಪಾತವು ಆರೋಗ್ಯಕ್ಕೆ ಹಾನಿಕಾರಕವಾಗುವುದಲ್ಲದೆ ಆರೋಗ್ಯವನ್ನು ಹಾಳು ಮಾಡಿ ಕೆಡಿಸುವುದು ! ಇದಕ್ಕೆ ಶಕ್ತವಾದ ಮಹಿಳೆಯರು ಅನೇಕರು ತಮ್ಮ ಜೀವನದಲ್ಲಿ ಕನಿಷ್ಠ ಪಕ್ಷ ಒಂದಾದರೂ ಗರ್ಭಪಾತ ಮಾಡಿಸಿಕೊಂಡಿರುವುದು ಸಾಮಾನ್ಯವಾಗಿದೆ. ನನಗೆ ಐದನೇ ತಿಂಗಳಲ್ಲಿ ಗರ್ಭಪಾತ ಮಾಡಲಾಯಿತು ; ಸಾವಿರಾರು ಹೆಚ್ಚು ಮಂಗಳನ್ನು ಡಾಕ್ಟರರು ಶಸ್ತ್ರ ಮತ್ತು ಔಷಧೋಪಚಾರಗಳಿಗೆ ಖರ್ಚು ಮಾಡಿದರೂ ನನ್ನ ಆರೋಗ್ಯವು ಇನ್ನೂ ಸುಧಾರಿಸಿಲ್ಲ.

ಕುಟುಂಬ ಯೋಜನೆ ಸ್ಕೀಂ (1) ಮಕ್ಕಳಿಲ್ಲದವರಿಗೆ (2) ಬ್ರಹ್ಮಚಾರಿಗಳು ವಿಶೇಷ ಕುಟುಂಬಕ್ಕೆ (3) ಆರು ಮಕ್ಕಳಿಗಿಂತಲೂ ಹೆಚ್ಚು ಮಕ್ಕಳಿದ್ದ ಅವುಗಳನ್ನು ಸಾಕುವುದು ಕಷ್ಟವಾಗಿರುವವರಿಂದ ಮಾತ್ರ ಅಭಿಲಾಷಿಸಲಾಗಿದೆ.

ಕುಟುಂಬ ಯೋಜನೆಗಾಗಿ ಗೊಡ್ಡು ಮಾಡಿಸಿಕೊಂಡಿರುವ ಪುರುಷರೂ ವಿಶೇಷ ಸ್ತ್ರೀಯರನ್ನು ನಾನು ವಿಚಾರಿಸಿದಲ್ಲಿ ಒಬ್ಬರೂ ಆ ಶಸ್ತ್ರಚಿಕಿತ್ಸೆಯಿಂದ ಕೃಪಿಗೊಂಡವರಲ್ಲ— ವಿಶೇಷವಾಗಿ ಹೆಂಗಸರು ಈ ಕ್ರಮವು ಅತ್ಯಂತ ನೋವು ಮತ್ತು ನಿಶ್ಶಕ್ತಿಯೆಂದೂ ಅಡಿಗೆ ಮನೆಯಲ್ಲಿ ಅಲಸ ಮೂಡಲು ಅಸಮರ್ಥತೆಯೆಂದೂ ದೂರುತ್ತಾರೆ. ಪುರುಷರು ಸೋಮಾರಿಗಳೂ ನಪುಂಸಕರೂ ಆಗುತ್ತಾರೆ.

ಈ ಕಲ್ಪನೆಯನ್ನು ಕೂಡಲೇ ನಿಲ್ಲಿಸಿ ಮತ್ತು ಈ ಹಣವನ್ನು ಮಕ್ಕಳ ಗೃಹಗಳ ಸ್ಥಾಪನೆಗೆ ಉಪಯೋಗಿಸಿ : ಕುಟುಂಬ ಯೋಜನೆಯಿಂದ ಬರುವ ಫಲಿತಾಂಶವೆಂದರೆ, ಈ ಜಗತ್ತಿನ ಸಲಕರಣೆಯಿಂದ ಸಂಕಟ ಹೆಚ್ಚಿಸಿಕೊಳ್ಳುವುದೊಂದು ಮಾತ್ರವಾಗಿದೆ;

‡ ಸತ್ಯವನ್ನು ತಿಳಿಸುವ ಧೈರ್ಯ ಹೊಂದಿದ ಸತಿ ವಿಶ್ವರಿಗೆ ವಂದನೆಗಳು : ಈ ಮೂಢ ಭ್ರಮೆಗೆ ಶಾಸ್ತ್ರದವರಿಗೆ ಏನೂ ಪ್ರಯೋಜನವಿಲ್ಲವೆಂದು ಸತಿ ವಿಶ್ವರು ತಿಳಿಸಿರುವುದು ಕುಟುಂಬಯೋಜನೆ ವಿಂದ್ಯದ ಮಾತ್ರ ರಾಜದ್ರೋಹಕರವಾಗಿದೆ.

ಸಂಸಾರ ಚಿಕ್ಕದಾಗಿರುವುದು ಎಷ್ಟು ಪ್ರಯೋಜನವಾಗಿದ್ದರೂ, ಈ ಪೂರ್ತಿ ವಿಷಯವು ಅನೈತಿಕವಾಗಿದೆ ; ಕೆಟ್ಟ ನಡತೆ ಹುಡುಕುತ್ತಿವೆ : ಅನೀತಿ ಮಕ್ಕಳ ರಾಜಾರಾಗಳು ಬೇಗ ಸಾಯಿಸುತ್ತಿದೆ. ನಾಗರೀಕತೆಯನ್ನು ಹಾಳು ಮಾಡುತ್ತದೆ ಮತ್ತು ಇದನ್ನು ಕನ್ನ ನಷ್ಟದಿಂದ ಅರಿಯುತ್ತದೆ — Truth

---

ಶ್ರೀನಗರ— ಇಲ್ಲಿನ ಸ್ವಲ್ಪ ದೂರದಲ್ಲಿ ಪಾಕಿಸ್ತಾನಿ ಧಾಳಿಕಾರರು ಗುಂಪೊಂದು ಮೊದಲು ನಮ್ಮ ಒಬ್ಬ ಕಾನಸ್ಟೆಬಲನ್ನು ಕೊಂದು ಮತ್ತೊಬ್ಬನಿಗೆ ಗಾಯಪಡಿಸಿತು ; ಭಾರತ ರಕ್ಷಣಾಪಡೆ ಬಂದೊಡನೆ ಪರಾರಿಯಾದುದು

★

ನಾಳೆ ಸತ್ಯವಾದಿ ಕಾರ್ಯಾಲಯಕ್ಕೆ ರಜವಿದೆ.

ಪೂರ್ಣ ಗುಣವಾಗದಿದ್ದಲ್ಲಿ ಹಣ ವಾಪಸ್

ಕೇವಲ 15 ದಿನಗಳಲ್ಲಿ ಪುರುಷ ನಿಶ್ಶಕ್ತಿಗೆ ಶಾಶ್ವತ ಗುಣ : ಜೀವನದಲ್ಲಿ ಮುಪ್ಪಾದಂತೆ ಭಾವಿಸುವವರು ಮತ್ತೆ ಸಂಸಾರದಲ್ಲಿ ಜಿಗಿಪ್ಸೆ ಹೊಂದಿದವರು ಇಂದೇ ಡಾ॥ ಮೋತಿಯವರ ಸಲಹೆ ಪಡೆಯಿರಿ.

ಇವರು ನಂಗಳ ದೌರ್ಬಲ್ಯ, ಅತಿ ಮೂತ್ರ, ಸ್ವಪ್ನಾವಸ್ಥೆ, ಸ್ತ್ರೀಯರ ಬಹು ಶ್ವೇತ ಸ್ರಾವದ ತೊಂದರೆ, ವೀರ್ಯ ಇದೇ ರೀತಿಯ ಸಕಲ ಗುಪ್ತ ರೋಗಗಳನ್ನೂ ಸುಧಾರಿಸುವರು

ಜನತಾ ಡಿಸ್ಪೆನ್ಸರಿ

ಪ್ರತಿ ದಿನವೂ } ಬೆಳಿಗ್ಗೆ 10 ರಿಂದ 1
ಸಲಹೆ ಕಾಲ } ಸಂಜೆ 4 ರಿಂದ 8

ಹೆಡ್ ಆಫೀಸ್ :

ಪಿ.ಬೀದಾರ್ ಚಕ್ರಂ ರೋಡ್
ಬೆಂಗಳೂರು 9 : ಫೋನ್ ನಂಬರ್ 75332.

ವುಡಲಾಂಡ್ಸ್ 27—8—65 ರಿಂದ

ಆಮೋಘ ಅಂಧ

ನೀವು ಇದುವರೆಗೂ ನೋಡದಿರುವ ಅದ್ಭುತ ದೃಶ್ಯಗಳನ್ನೂ, ವಿಚಿತ್ರಗಳನ್ನೂ ನೋಡಿ ಆನಂದಿಸಿ

ಭೂತ್ ಬಂಗ (ಹಿಂದಿ) Bhoot Bangla

ಮಮತಾ ಶಾದ್, ತನೂಜ, ನಾಜಿಂ ಹುಸೇನ್, ಅಸಿತ್ ಸೇನ್ ನಾನಾವಾಲ್ ಸಿಕಂದರ್

ಪ್ರತಿ ದಿನ 3 ಪ್ರದರ್ಶನಗಳು

ಅಪೆರ— 29-8—65 ರಿಂದ

ವೀರ ಅಭಿಮನು (ತೆಲುಗು)

ತಾರಕ — ಎನ್.ಟಿ.ರಾಮರಾವ್, ಕಾಂಚನ, ಕಾಂತಾರಾವ್, ರಾಜನಾಲ

ಪದ್ಮನಾಭಂ, ಸೋ.ಬ್ರಹ್ಮಣ್ಯಂ, ಜಿ.ವಂಲಕ್ಷ್ಮಿ [ದಿನ 3 ಆಟಗಳು

SHAKTI

SUDHA

A Superb Tonic

Protect the Cow

ಗೋಸಂರಕ್ಷಣೆ ಮತ್ತು ಪ್ರಾಣಿದಯಾ ಕಾರ್ಯಗಳು ಹೆಚ್ಚೆಚ್ಚಾಗಿ ನಡೆಯಲಿ

ಆಶೋಕ ಪಬ್ಲಿಸಿಟೀಸ್

ಲ್ಯಾನ್ಸ್‌ಡೌನ್ ಬಿಲ್ಡಿಂಗ್ಸ್, ಮೈಸೂರು

ಎಲ್ಲ ವಿಧದ ಆಯುರ್ವೇದ ಔಷಧಗಳೂ ನಮ್ಮಲ್ಲಿ ದೊರೆಯುತ್ತವೆ

ರೋಗಿಗಳಿಗೆ ಸೂಕ್ತ ಔಷಧಿ ಕೊಡಲಾಗುತ್ತದೆ

Quality, Printing — Neat Binding

Lakshminarasimha Press

Sivarampet, Mysore

Edited, Printed & Published by Dharma prachara niratha M S Krishna Rao (Proprietor) at the Satyavadi Press Chamarajapuram, Mysore 4